

بِسْمِ اللّٰهِ الرَّحْمَنِ الرَّحِيم

# ಯು.ಕೆ. ಜಲ್ಸ ಸಾಲಾನ – 2018

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಹದೀಖತುಲ್ ಮಹ್‌ದಿ'**ಯಿಂದ **03–08–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್‌ಹಮ್‌ದುಲಿಲ್ಲಾಹ್, ಅಲ್ಲಾಹನ ಅನುಗ್ರಹದಿಂದ ನಾವು ಇನ್ನೊಂದು ಜಲ್ಸ ಸಾಲಾನದಲ್ಲಿ ಭಾಗವಹಿಸುವ ಭಾಗ್ಯ ಗಳಿಸುತ್ತಿದ್ದೇವೆ. ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಜಲ್ಸದ ಈ ಮೂರು ದಿನಗಳಲ್ಲಿ ಜಲ್ಸದ ಆಧ್ಯಾತ್ಮಿಕ ಪರಿಸರದ ಲಾಭ ಪಡೆಯಲು ಪ್ರಯತ್ನಿಸಬೇಕು. ಜಲ್ಸದ ಕಾರ್ಯಕ್ರಮಗಳನ್ನು ಮೌನವಾಗಿ ಲಕ್ಷ್ಯವಿಟ್ಟು ಆಲಿಸಬೇಕು. ಹಾಗೆ ಮಾಡಿದರೆ ಮಾತ್ರ ಜಲ್ಸದಲ್ಲಿ ಭಾಗವಹಿಸಿದ ಪ್ರಯೋಜನ ಸಿಗುವುದು.

ಜಲ್ಸದ ಕೆಲಸಗಳಲ್ಲಿ ಕುಂದುಕೊರತೆಗಳೂ ಬಲಹೀನತೆಗಳೂ ಇರುತ್ತವೆ. ಕಾರ್ಯಕರ್ತರು ತಮ್ಮ ಕೆಲಸಗಳನ್ನು ಪರಿಶೋಧಿಸಿ ಅವುಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಾ ಇರಬೇಕಲ್ಲದೆ ಅತಿಥಿಗಳು ಸಹ ಈ ಕುಂದುಕೊರತೆಗಳನ್ನೂ ಬಲಹೀನತೆಗಳನ್ನೂ ಕಡೆಗಣಿಸುವುದು ಆವಶ್ಯಕವಾಗಿದೆ. ಕಾರ್ಯಕರ್ತರಿಗೆ ಸಹಾಯದ ಆವಶ್ಯಕತೆ ಇದ್ದರೆ ಅತಿಥಿಗಳು ಸ್ವತಃ ತಮ್ಮನ್ನು ಸೇವೆಗೆ ಅರ್ಪಿಸಲು ಸಿದ್ಧರಾಗಬೇಕು. ನಾವು ಒಬ್ಬರಿನ್ನೊಬ್ಬರ ಭಾರ ಹೊರಲು ಸಿದ್ಧರಾಗುವಾಗ ಮಾತ್ರ ನಮ್ಮಲ್ಲಿ ಐಕ್ಯತೆ ಉಂಟಾಗುವುದು. ಈ ಮೂಲ ತತ್ವವನ್ನು ಅತಿಥಿಗಳೂ ಆತಿಥೇಯರೂ ನೆನಪಿಡಬೇಕಾದುದು ಆವಶ್ಯಕವಾಗಿದೆ.

ಈಗ ನಾನು ಅತಿಥಿಗಳಿಗೆ ಮತ್ತು ಆತಿಥೇಯರಿಗೆ ಕೆಲವು ವಿಷಯಗಳ ಬಗ್ಗೆ ಲಕ್ಷ್ಯ ನೀಡಲು ಹೇಳುತ್ತೇನೆ. ನಾನು ಮೊದಲು ಕಾರ್ಯಕರ್ತರೊಂದಿಗೆ ಹೇಳಲು ಬಯಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಆಜ್ಞೆ ಪ್ರಕಾರ ಜಾರಿಗೊಳಿಸಿದ ಜಲ್ಸದಲ್ಲಿ ಭಾಗವಹಿಸಲು ಆಗಮಿಸಿದವರ ಸೇವೆ ಮಾಡಲು ನೀವು ನಿಮ್ಮನ್ನು ಅರ್ಪಿಸಿರುವಿರಿ. ಅತಿಥಿಗಳು ಯಾವುದೇ ಲೌಕಿಕ ಜಾತ್ರೆಯಲ್ಲಿ ಭಾಗವಹಿಸಲು ಆಗಮಿಸಿದವರಲ್ಲ. ಅವರು ತಮ್ಮ ಆಧ್ಯಾತ್ಮಿಕ, ಜ್ಞಾನ ಸಂಬಂಧವಾದ ಮತ್ತು ನೈತಿಕವಾದ ಮಟ್ಟವನ್ನು ಉತ್ತಮಪಡಿಸಲು ಆಗಮಿಸಿದವರಾಗಿದ್ದಾರೆ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿಯ ಯೋಚನೆ ಇದೇ ಆಗಿದೆ ಎಂದು ನಾನು ಪ್ರತೀಕ್ಷಿಸುತ್ತೇನೆ. ಮತ್ತು ಇದುವೇ ಅವರ ಉದ್ದೇಶವಾಗಬೇಕಾಗಿದೆ. ಹಾಗೆ ಅಲ್ಲವಾದರೆ ಈ ಜಲ್ಸದಲ್ಲಿ ಭಾಗವಹಿಸುವುದು ನಿರರ್ಥಕವಾಗುತ್ತದೆ. ಏನಿದ್ದರೂ ಕಾರ್ಯಕರ್ತರು ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ಅತಿಥಿಗಳ ವರ್ತನೆ ಹೇಗೆಯೇ ಇರಲಿ ಕೆಲಸ ಮಾಡುವವರು ಅತಿಥಿಗಳ ಭಾವನೆಗಳನ್ನು ಪರಿಗಣಿಸಿ ವರ್ತಿಸಬೇಕು. ಹಾಗೆ ಮಾಡಿದರೆ ಮಾತ್ರ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸಾಧ್ಯವಾಗುವುದು.

ನಾವು ಯಾವ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುತ್ತಿದ್ದೇವೆಯೋ ಅವರು ಅತಿಥಿಗಳಿಗೆ ಸಂಬಂಧಿಸಿ ಪ್ರಕಟಿಸಿದ ಉತ್ತಮ ನಡೆವಳಿಕೆ ಹೇಗಿತ್ತು? ನಗರವಾಸಿಗಳಾದ ಅವರ ಅತಿಥಿಗಳು ಪ್ರತಿದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಾಣುವವರಾಗಿದ್ದರು. ಅವರನ್ನು ಅವರ ಬಡತನದ ಕಾರಣದಿಂದ ಅಥವಾ ಬೇರೆ ಕಾರಣದಿಂದ ಊಟಕ್ಕೆ ಕರೆದಾಗ ಅವರು ದೀರ್ಘಕಾಲ ಕುಳಿತು ಮಾತನಾಡುತ್ತಿದ್ದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತೊಂದರೆ ಆಗುತ್ತಿತ್ತು. ಆದರೆ ಆ ಅತಿಥಿಗಳೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ಹೇಳುತ್ತಿರಲಿಲ್ಲ: ನೀವು ಸಮಯಕ್ಕೆ ಮೊದಲೇ ಬರಬೇಡಿರಿ, ನನಗೆ ಕೆಲಸವಿದೆ, ನೀವು ಊಟಮಾಡಿ ಬೇಗ ಹೋಗಿರಿ, ನೀವು ಕುಳಿತಿದ್ದರೆ ನನಗೆ ನನ್ನ ಕೆಲಸಕ್ಕೆ ತೊಂದರೆಯಾಗುತ್ತದೆ, ಎಂದೆಲ್ಲಾ ಹೇಳುತ್ತಿರಲಿಲ್ಲ. ಜನರ ಈ ವರ್ತನೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಿಸುತ್ತಾ ಇದ್ದುದನ್ನು ಕಂಡಾಗ ಅಲ್ಲಾಹನು ಸತ್ಯವಿಶ್ವಾಸಿಗಳೊಂದಿಗೆ ಹೇಳಿದನು, **ಫಯಸ್‌ತಹ್‌ಯೀ ಮಿನ್‌ಕುಮ್.** ನಿಮ್ಮ ಭಾವನೆಗಳನ್ನು ಪರಿಗಣಿಸಿ ಅವರು ನಿಮ್ಮನ್ನು ತಡೆಯಲು ಸಂಕೋಚಪಡುತ್ತಿದ್ದಾರೆ. ಆದರೆ ಅಲ್ಲಾಹನು ಹಾಗೆ ಹೇಳಲು ಸಂಕೋಚಪಡುವುದಿಲ್ಲ. ಆದುದರಿಂದ ಸತ್ಯವಿಶ್ವಾಸಿಗಳು ಅನಾವಶ್ಯಕವಾಗಿ ಪ್ರವಾದಿಯವರ ಮನೆಯಲ್ಲಿ ಕುಳಿತುಕೊಂಡು ಅವರಿಗೆ ತೊಂದರೆ ಕೊಡಬಾರದು.

ಇಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಅತಿಥಿಗಳೊಂದಿಗೆ ವರ್ತಿಸುತ್ತಿದ್ದ ಅತ್ಯುತ್ತಮ ಮಾದರಿಯನ್ನು ಪ್ರಸ್ತಾಪಿಸಿದನಲ್ಲದೆ ಇನ್ನೊಂದು ಕಡೆ ಅತಿಥಿಗಳಿಗೆ ಆಜ್ಞಾಪಿಸಿದನು ಅತಿಥಿಗಳು ತಮ್ಮ ಹಕ್ಕುಗಳನ್ನು ಮೀರಿ ವರ್ತಿಸಬಾರದೆಂದು. ಅತಿಥಿಗಳು ತಾವು ಅತಿಥಿಗಳಾಗಿರುವುದರಿಂದ ಅನುಚಿತವಾದ ಲಾಭ ಪಡೆಯಲು ಪ್ರಯತ್ನಿಸಬಾರದು.

ಅದೇ ರೀತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್ಯ ಜನರೊಂದಿಗೆ ಅವರು ಅತಿಥಿಗಳಾಗಿ ಬಂದಾಗ ವರ್ತಿಸಿದ ಅತ್ಯುನ್ನತ ರೀತಿ, ಅವರ ವಿಶಾಲ ಮನೋಭಾವ ನೋಡುವಾಗ ನಾವು ಆಶ್ಚರ್ಯಚಕಿತರಾಗುತ್ತೇವೆ. ಅದರ ಒಂದು ಉದಾಹರಣೆ ಹೀಗಿದೆ, ಒಬ್ಬ ಮುಸ್ಲಿಮೇತರ ವ್ಯಕ್ತಿ ಅತಿಥಿಯಾಗಿ ಬಂದಾಗ ಅವನನ್ನು ಸತ್ಕರಿಸಲಾಯಿತು. ಅವನು ಬೆಳಗ್ಗೆ ಎದ್ದು ಹೋಗುವಾಗ ತನ್ನ ಹಾಸಿಗೆಯನ್ನು ಮಲಿನಗೊಳಿಸಿ ಹೋದನು. ಆ ಮಾಲಿನ್ಯವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ತೊಳೆದರು. ಸಹಾಬರು ಹೇಳಿದರು ನಾವು ಸಹಾಯ ಮಾಡುತ್ತೇವೆ. ತಾವು

ಕಷ್ಟಪಡಬೇಡಿರಿ ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಆತ ನನ್ನ ಅತಿಥಿಯಾಗಿದ್ದ. ನಾನೇ ಅವನ ಮಾಲಿನ್ಯವನ್ನು ತೊಳೆಯುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉನ್ನತ ಆದರ್ಶ ಗುಣವನ್ನು ಸಮಗಟ್ಟಲು ಯಾರಿಗೂ ಸಾಧ್ಯವಾಗದು.

ನಮ್ಮ ಜಲ್ಸಕ್ಕೆ ನಮ್ಮವರೂ ಬರುತ್ತಾರೆ, ಅನ್ಯರೂ ಬರುತ್ತಾರೆ. ಆಗಮಿಸುವ ಎಲ್ಲರೂ ಉತ್ತಮ ಸ್ವಭಾವ ಗುಣಗಳನ್ನು ಹೊಂದಿರುತ್ತಾರೆ. ಅವರು ಧರ್ಮದ ಬಗ್ಗೆ ಕಲಿಯಲು ಆಗಮಿಸುತ್ತಾರೆ. ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಬಗ್ಗೆ ಮಾಹಿತಿ ಗಳಿಸಲು ಬರುತ್ತಾರೆ. ಮಾನವ ಸಹಜವಾದ ಬಲಹೀನತೆಗಳು ಪ್ರತಿಯೊಬ್ಬರಲ್ಲಿಯೂ ಇರುತ್ತವೆ. ಏನಾದರೂ ಹೆಚ್ಚು ಕಮ್ಮಿ ಆದರೂ ಸಹ, ಯಾರಾದರೂ ಏನಾದರೂ ತಪ್ಪು ಮಾಡಿದರೂ ಸಹ ನಾವು ಅವರ ಬಗ್ಗೆ ಕೆಟ್ಟ ಸ್ವಭಾವದವರೆಂದು ಅಥವಾ ಅವರ ಸಂಕಲ್ಪ ಚೆನ್ನಾಗಿಲ್ಲವೆಂದು ಆಕ್ಷೇಪಿಸಬಾರದು. ಮನುಷ್ಯ ಸಹಜವಾದ ಬಲಹೀನತೆಯ ಕಾರಣ ಕೆಲವು ಸಾರಿ ಹೆಚ್ಚು ಕಡಿಮೆ ಆಗುತ್ತದೆ. ಹಾಗೇನಾದರೂ ಆದರೆ ಸಹಿಸಬೇಕು. ಅಹ್ಮದಿಯಾದವನು ಅತಿಥಿಯಾದರೂ ಆತಿಥೇಯನಾದರೂ ಉತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸಬೇಕು. ಆದರೆ ಜಲ್ಸದಲ್ಲಿ ಅತಿಥಿಗಳ ಸೇವೆಗೋಸ್ಕರ ತಮ್ಮನ್ನು ಅರ್ಪಿಸಿಕೊಂಡವರು ಅವರು ಅತ್ಯುತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸಬೇಕಾದುದು ಆವಶ್ಯಕವಾಗಿದೆ. ಕಾರ್ಯಕರ್ತರು ಸಹನೆಯಿಂದ ವರ್ತಿಸಿದರೆ, ಉತ್ತಮ ಸ್ವಭಾವಗುಣಗಳನ್ನು ಪ್ರಕಟಿಸಿದರೆ, ಅನ್ಯರು ತಮ್ಮ ವರ್ತನೆ ಬಗ್ಗೆ ಲಜ್ಜಿತರಾಗುವರು. ಆದುದರಿಂದ ಪ್ರತಿಯೊಬ್ಬ ಕಾರ್ಯನಿರ್ವಾಹಕನು ತಾನು ಕಾರ್ಯನಿರತನಾದ ವಿಭಾಗದಲ್ಲಿ ಉತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸಬೇಕು. ಈ ದಿನಗಳಲ್ಲಿ ಅದನ್ನೊಂದು ಸವಾಲಾಗಿ ಸ್ವೀಕರಿಸಿ ಅದರಂತೆ ವರ್ತಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಈ ವಿಷಯದ ಬಗ್ಗೆ ಗಮನ ಹರಿಸಿ ಹೇಳಿದ್ದಾನೆ: **ಖೂಲೂ ಲಿನ್ನಾಸಿ ಹುಸ್‌ನಾ.** ನೀವು ಜನರೊಂದಿಗೆ ಒಳ್ಳೆಯ ಮತ್ತು ಮೃದುವಾದ ಮಾತುಗಳನ್ನು ಆಡಿರಿ. ಕಲಹಗಳನ್ನು ಕೊನೆಗೊಳಿಸಲು ಮತ್ತು ಉತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸಲು ಇದು ಮೂಲಭೂತ ತತ್ವವಾಗಿದೆ. ಇದು ಒಂದು ವಿಶಿಷ್ಟ ಸಂದರ್ಭಕ್ಕೆ ಮಾತ್ರ ಅನ್ವಯಿಸುವುದಲ್ಲ. ಇದು ಸದಾಕಾಲ ಪರಿಪಾಲನೆ ಮಾಡಬೇಕಾದ ತತ್ವವಾಗಿದೆ. ಮನುಷ್ಯನು ಈ ಸ್ವಭಾವಗುಣದ ಅಭ್ಯಾಸ ಹೊಂದಿದರೆ ಮನಸ್ತಾಪಗಳು ಮತ್ತು ಅತಿರೇಕ ವರ್ತನೆಗಳು ತಲೆದೋರಲಾರವು. ಆದುದರಿಂದ ಅತಿಥಿಗಳೂ ಆತಿಥೇಯರೂ ಯಾವಾಗಲೂ ಅಲ್ಲಾಹನ ಈ ಉಪದೇಶವನ್ನು ನೆನಪಿಟ್ಟುಕೊಳ್ಳಬೇಕು ಮತ್ತು ವಿಶಿಷ್ಟವಾಗಿ ಈ ದಿನಗಳಲ್ಲಿ ನಿಶ್ಚಯವಾಗಿಯೂ ಈ ಉಪದೇಶವನ್ನು ಅನುಷ್ಠಾನಕ್ಕೆ ತರಬೇಕು. ಇಲ್ಲಿನ ಪರಿಸರವನ್ನು ಎಲ್ಲರೂ ಸೇರಿಕೊಂಡು ಸಂತೋಷಭರಿತವನ್ನಾಗಿ ಮಾಡಬೇಕು. ಆ ಮೂಲಕ ನಾವು ಯಾವ ಉದ್ದೇಶಕ್ಕೋಸ್ಕರ ಇಲ್ಲಿ ಜಮಾಯಿಸಿರುವೆವೋ ಅದು ಈಡೇರುವಂತಾಗಲಿ ಆ ಉದ್ದೇಶ ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಯನ್ನು ಉತ್ತಮಪಡಿಸುವುದಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ: ತ್ರಾಸಿನಲ್ಲಿ ಉತ್ತಮ ಸ್ವಭಾವಗುಣಕ್ಕಿಂತ ಹೆಚ್ಚು ಭಾರವಾದ ವಸ್ತು ಬೇರೊಂದಿಲ್ಲ. ಒಳ್ಳೆಯ ಸ್ವಭಾವಗುಣ ಹೊಂದಿದವನು ನಮಾಝ್ ಮತ್ತು ಉಪವಾಸಗಳ ಅನುಷ್ಠಾನಗಳಿಗೆ ಬದ್ಧನಾಗಿರುವ ಸ್ಥಾನಗಳಿಸುತ್ತಾನೆ. ಎಂದರೆ ಅವನಿಗೆ ಒಳಿತುಗಳನ್ನು ಮಾಡುವ ಭಾಗ್ಯ ಲಭಿಸುತ್ತದೆ. ಒಳಿತುಗಳು ಅನೇಕ ಒಳಿತುಗಳ ಮಕ್ಕಳನ್ನು ಹುಟ್ಟಿಸುತ್ತವೆ. ಆದುದರಿಂದ ಕಾರ್ಯಕರ್ತರು ತಮ್ಮ ಮೇಲೆ ಕಡ್ಡಾಯ ಮಾಡಿಕೊಳ್ಳಬೇಕು– ಬೇರೆಯವರ ವರ್ತನೆ ಹೇಗೆಯೇ ಇದ್ದರೂ ಕಾರ್ಯಕರ್ತರ ಮುಖ ಚಹರೆಗಳಲ್ಲಿ ಯಾವಾಗಲೂ ಮುಗುಳು ನಗೆ ಇರಬೇಕು. ಈ ಬಾಹ್ಯ ಪ್ರಕಟಣೆಯ ಪ್ರಭಾವ ಅವರ ಹೃದಯಗಳಲ್ಲಿಯೂ ಇರುತ್ತವೆ. ಅವರ ಹೃದಯಗಳಲ್ಲಿ ಕಠಿಣ ಮನೋಭಾವ ತಲೆದೋರಲಾರದು. ಹೃದಯದಲ್ಲಿ ಕಠಿಣ ಮನೋಭಾವ ಇಲ್ಲದಿರುವಾಗ ತಪ್ಪು ನಿರ್ಧಾರವೂ ಇರಲಾರದು. ಏಕೆಂದರೆ ಕೋಪದಿಂದ ತಪ್ಪು ನಿರ್ಧಾರ ಕೈಗೊಳ್ಳಲಾಗುತ್ತದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಸ್ವಭಾವದ ಅತ್ಯುನ್ನತ ಮಟ್ಟವನ್ನು ವಿವರಿಸುತ್ತಾ ಒಬ್ಬ ಸಹಾಬಿ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹೆಚ್ಚು ಹಸನ್ಮುಖಿಯಾದ, ಮುಗುಳು ನಗುತ್ತಾ ಇರುವ ಬೇರೊಂದು ಮುಖಚಹರೆಯನ್ನು ನಾನು ಕಂಡಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದರು: ನೀವು ಮೃದುವಾಗಿ ವರ್ತಿಸಿರಿ. ಏಕೆಂದರೆ ಮೃದುತ್ವದಿಂದ ವಂಚಿತನಾದವನು ಒಳಿತಿನಿಂದಲೂ ವಂಚಿತನಾಗುತ್ತಾನೆ. ಈ ವಿಷಯವನ್ನು ಕಾರ್ಯಕರ್ತರೂ ಜಲ್ಸದಲ್ಲಿ ಭಾಗವಹಿಸುವವರೂ ಮನವರಿಕೆ ಮಾಡಿಕೊಳ್ಳುವುದಾದರೆ ಈ ಪರಿಸರದ ಕಾರಣದಿಂದ, ನಾವು ಅನುಗ್ರಹಗಳ ಜೋಳಿಗೆಗಳನ್ನು ತುಂಬಿಸುವವರಾಗುವೆವು.

ಅದೇ ರೀತಿ ಜಲ್ಸದಲ್ಲಿ ಭಾಗವಹಿಸುವವರೊಂದಿಗೆ ಸಹ ನಾನು ಹೇಳಲು ಬಯಸುತ್ತೇನೆ. ಜಲ್ಸದ ಇಷ್ಟು ವಿಶಾಲವಾದ ವ್ಯವಸ್ಥೆಗಳನ್ನು ಅಲ್ಲಾಹನ ಅನುಗ್ರಹದಿಂದ ಸ್ವಯಂ ಸೇವಕರ ಮೂಲಕ ನಡೆಸಲಾಗುತ್ತಿದೆ. ಅವರು ನಮ್ಮ ನೌಕರರೇನೂ ಅಲ್ಲ. ಕೆಲವರು ಬಹಳ ಉತ್ತಮ ಹುದ್ದೆ ಹೊಂದಿದವರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸಬೇಕೆಂಬ ಏಕಮಾತ್ರ ಮನೋಭಾವದಿಂದ ಸೇವೆ ಮಾಡುತ್ತಿದ್ದಾರೆ. ಬೇರೆ ಕೆಲವು ಯುವ ಜನರು ಸೆಕಂಡರಿ ಶಾಲೆಗಳಲ್ಲೂ ಯುನಿವರ್ಸಿಟಿಗಳಲ್ಲೂ ವಿದ್ಯಾರ್ಥಿಗಳಾಗಿದ್ದಾರೆ. ಹುಡುಗರೂ ಇದ್ದಾರೆ, ಹುಡುಗಿಯರೂ ಇದ್ದಾರೆ. ಮಕ್ಕಳು ಸಹ ಇದ್ದಾರೆ. ಇವರೆಲ್ಲರೂ ಸೇವಾ ಮನೋಭಾವದಿಂದ ವರ್ತಿಸುತ್ತಿದ್ದಾರೆ. ಆದುದರಿಂದ ಎಲ್ಲಿಯಾದರೂ ಚಿಕ್ಕಪುಟ್ಟ ಬಲಹೀನತೆಗಳನ್ನು ಕಂಡರೆ ಅವುಗಳನ್ನು ಕಡೆಗಣಿಸಿರಿ. ಒಬ್ಬ ಅತಿಥಿಗೆ ಯಾವುದಾದರೂ ವಿಭಾಗದಲ್ಲಿ ಯಾವುದಾದರೂ ಕುಂದುಕೊರತೆ ಕಾಣಿಸಿದರೆ ಅದರ ಬಗ್ಗೆ ದೂರನ್ನು ಆ ವಿಭಾಗದ ಮುಖ್ಯಾಧಿಕಾರಿಗೆ ಬರೆದು ತಿಳಿಸಿರಿ. ಅಲ್ಲದೆ ಅದರ

ಬಗ್ಗೆ ಕಾರ್ಯಕರ್ತರೊಂದಿಗೆ ಜಗಳ ಮಾಡಬೇಡಿರಿ. ಹಾಗೆ ಮಾಡಿದರೆ ಈ ವರ್ಷದ ಕುಂದುಕೊರತೆಗಳನ್ನು ಮುಂದಿನ ವರ್ಷವಾದರೂ ನಿವಾರಿಸಲು ಸಾಧ್ಯವಾಗುವುದು. ನಮ್ಮ ಜಮಾಅತಿನ ವ್ಯವಸ್ಥೆ ಹೇಗಿವೆ ಎಂದರೆ ಯಾವ ಬಲಹೀನತೆಗಳ ಬಗ್ಗೆ ಬೊಟ್ಟುಮಾಡಿ ತೋರಿಸಲಾಗುತ್ತವೆಯೋ ಅವುಗಳನ್ನು ನಿವಾರಿಸಲು ಪ್ರಯತ್ನ ಮಾಡಲಾಗುತ್ತಿದೆ.

ಅತಿಥಿ ಸತ್ಕಾರದ ಒಂದು ಮುಖ್ಯ ವಿಭಾಗ ಆಹಾರ ತಯಾರಿಸುವುದಾಗಿದೆ. ಆಹಾರ ತಯಾರಿಸುವವರು ಆಹಾರವನ್ನು ಉತ್ತಮ ರೀತಿಯಲ್ಲಿ ತಯಾರಿಸುವ ಬಗ್ಗೆ ಲಕ್ಷ್ಯ ನೀಡಬೇಕು. ಇದರ ಬಗ್ಗೆ ಅತಿಥಿಗಳು ದೂರು ಸಲ್ಲಿಸಲಾರರೆಂದು ನನಗೆ ಪ್ರತೀಕ್ಷೆ ಇದೆ. ಯಾರಾದರೂ ದೂರು ನೀಡುವುದಾದರೆ ಸಿಟ್ಟಿನಿಂದ ದೂರು ನೀಡಬೇಡಿರಿ. ನೀವು ಪ್ರೀತಿಯಿಂದ ವ್ಯವಸ್ಥಾಪಕರಿಗೆ ತಿಳಿಸಿರಿ. ಇಂತಿಂತಹ ಕುಂದುಕೊರತೆಗಳಿವೆ ಅವುಗಳನ್ನು ನಿವಾರಿಸಿರಿ ಎಂದು.

ಜಲ್ಸದಲ್ಲಿ ಭಾಗವಹಿಸುವವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಉಪದೇಶವನ್ನು ಗಮನಿಸಬೇಕು. ಅವರು ಹೇಳಿದರು, ಇಸ್ಲಾಮಿನ ಒಂದು ಸದ್ಗುಣವೇನೆಂದರೆ ಸತ್ಯವಿಶ್ವಾಸಿ ಅನಾವಶ್ಯಕವಾದ ನಿರರ್ಥಕ ಮಾತುಗಳನ್ನು ಆಡುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಜಲ್ಸವನ್ನು **ಖಾಲಿಸ್ ಲಿಲ್ಲಾಹಿ ಜಲ್ಸ** ಅಲ್ಲಾಹನಿಗೋಸ್ಕರವಾಗಿರುವ ಶುದ್ಧವಾದ ಜಲ್ಸ ಎಂದು ಹೇಳಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ಪ್ರತಿಯೊಂದು ರೀತಿಯ ಹರಟೆಗಳಿಂದ ಸಮಯ ಕಳೆಯುವುದನ್ನು ತ್ಯಜಿಸಬೇಕು. ಜಲ್ಸದ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಆಲಿಸಿರಿ. ಅತ್ಯಂತ ಆವಶ್ಯಕ ಸಂದರ್ಭಗಳಲ್ಲಿ ಹೊರತು ಜಲ್ಸದಿಂದ ಎದ್ದು ಹೋಗಬೇಡಿರಿ.

ಇಂದಿನ ಲೌಕಿಕ ಪರಿಸರದಲ್ಲಿ ಮಕ್ಕಳನ್ನು ಮತ್ತು ಯುವಕರನ್ನು ಧರ್ಮದ ಮಹತ್ವದ ಬಗ್ಗೆ ಪ್ರಜ್ಞೆಯುಳ್ಳವರನ್ನಾಗಿ ಮಾಡುವುದು ಮತ್ತು ಅದರೊಂದಿಗೆ ಜೋಡಿಸುವುದು ಬಹಳ ಮಹತ್ವಪೂರ್ಣ ಕೆಲಸವಾಗಿದೆ. ತಂದೆ ತಾಯಂದಿರು ಈ ವಿಷಯದ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಬೇಕು. ಎಲ್ಲಾ ತಂದೆ ತಾಯಂದಿರು ಈ ನಿಟ್ಟಿನಲ್ಲಿ ಪ್ರಯತ್ನಮಾಡಬೇಕು. ಅಲ್ಲಾಹನು ಅವರಿಗೆ ಹಾಗೆ ಮಾಡುವ ಭಾಗ್ಯ ನೀಡಲಿ.

ತರಬೇತಿ ಮತ್ತು ಧರ್ಮದೊಂದಿಗೆ ಜೋಡಿಸುವುದಕ್ಕೆ ಅತ್ಯಂತ ಮುಖ್ಯವಾದುದು ಆರಾಧನೆಯಾಗಿದೆ. ತಂದೆ ತಾಯಂದಿರು ಅದರ ಬಗ್ಗೆ ಬದ್ಧರಾಗಬೇಕು. ನಮಾಝ್‌ಗೆ ಮಕ್ಕಳನ್ನು ಕರೆದುಕೊಂಡು ಬರಬೇಕು. ಮನೆ ಮಸ್‌ಜಿದ್‌ನಿಂದ ಅಥವಾ ನಮಾಝ್ ಸೆಂಟರ್‌ನಿಂದ ದೂರವಿದ್ದರೆ ಮನೆಯಲ್ಲಿ ಬಾಜಮಾಅತ್ ನಮಾಝ್‌ಗೆ ವ್ಯವಸ್ಥೆ ಮಾಡಬೇಕು. ಕಾರ್ಯಕರ್ತರು ನಮಾಝ್ ನಿರ್ವಹಿಸಬೇಕು. ನಾವು ನಮಾಝ್ ಬಗ್ಗೆ ಲಕ್ಷ್ಯ ನೀಡುವುದಿಲ್ಲವಾದರೆ ನಮ್ಮ ಎಲ್ಲಾ ಕೆಲಸ ವ್ಯರ್ಥವಾಗುತ್ತದೆ.

ಜಲ್ಸದ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ತಮ್ಮ ಸ್ವಂತ ವಾಹನಗಳಲ್ಲಿ ಬರುವವರು ವ್ಯವಸ್ಥಾಪಕರೊಂದಿಗೆ ಸಹಕರಿಸಿರಿ. ಮಸ್‌ಜಿದ್ ಫಝ್ಲ್‌ಗೆ ನಮಾಝ್‌ಗೆ ಬರುವವರು ತಮ್ಮ ವಾಹನಗಳನ್ನು ನೆರೆಹೊರೆಯ ಜನರಿಗೆ ತೊಂದರೆ ಆಗುವ ರೀತಿಯಲ್ಲಿ ಪಾರ್ಕ್ ಮಾಡಬಾರದು.

ಶುಚಿತ್ವದ ಬಗ್ಗೆ ಸಹ ಬಹಳ ಗಮನ ಹರಿಸಬೇಕು. ಸ್ವಚ್ಛತೆ ಸತ್ಯವಿಶ್ವಾಸದ ಭಾಗ ಎಂಬುದನ್ನು ನೆನಪಿನಲ್ಲಿಡಬೇಕು. ಸ್ನಾನ ಗೃಹ ಮತ್ತು ಟಾಯಿಲೆಟ್‌ಗಳ ಸ್ವಚ್ಛತೆ ಬಗ್ಗೆ ಕಾರ್ಯಕರ್ತರೂ ಅತಿಥಿಗಳೂ ಗಮನ ಹರಿಸಬೇಕು. ದಾರಿಯಲ್ಲಿ, ಮೈದಾನದಲ್ಲಿ ಗ್ಲಾಸ್, ಟಿನ್, ಕವರ್, ಮೊದಲಾದುವುಗಳು ಬಿದ್ದಿದ್ದರೆ ಹೆಕ್ಕಿ ಡಸ್ಟ್ ಬಿನ್‌ಗಳಿಗೆ ಹಾಕಿರಿ.

ಭದ್ರತೆಯ ದೃಷ್ಟಿಯಿಂದ ನಿಮ್ಮ ಪರಿಸರದ ಕಡೆಗೆ ದೃಷ್ಟಿ ಇರಿಸಿರಿ. ಜಲ್ಸದ ಒಳಭಾಗದಲ್ಲಿ ಮತ್ತು ಹೊರಗೆ ಯಾರಾದರೂ ಉದ್ಧಟರು ದುರ್ವರ್ತನೆ ತೋರಲು ಸಾಧ್ಯವಿದೆ. ಆದುದರಿಂದ ಸುತ್ತಲೂ ದೃಷ್ಟಿ ಇರಿಸಿರಿ. ಯಾವುದಾದರೂ ಸಂಶಯಕರ ವಸ್ತುವನ್ನು ಕಂಡರೆ ಅಥವಾ ಯಾರದಾದರೂ ಅತಿರೇಕದ ವರ್ತನೆ ಕಂಡರೆ ಕೂಡಲೇ ವ್ಯವಸ್ಥಾಪಕರಿಗೆ ಅಥವಾ ಹತ್ತಿರವಿರುವ ಕಾರ್ಯಕರ್ತನಿಗೆ ತಿಳಿಸಿರಿ. ಮಹಿಳೆಯರು ಮೌನವಾಗಿ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಬೇಕು. ಅಲ್ಲಿರುವ ಕಾರ್ಯಕರ್ತೆಯರಿಗೆ ಸಹಕಾರ ನೀಡಬೇಕು.

ಅಲ್ಲಾಹನು ಎಲ್ಲರಿಗೂ ಜಲ್ಸದಿಂದ ಹೆಚ್ಚು ಹೆಚ್ಚಾಗಿ ಲಾಭ ಪಡೆಯಲು ಭಾಗ್ಯ ನೀಡಲಿ. ಅಲ್ಲಾಹನು ತನ್ನ ಅನುಗ್ರಹದಿಂದ ಈ ಜಲ್ಸವನ್ನು ಅನುಗ್ರಹದಾಯಕವನ್ನಾಗಿ ಮಾಡಲಿ. ಎಲ್ಲಾ ಕೆಡುಕುಗಳಿಂದ ರಕ್ಷಿಸಲಿ. ನಾವು ಯಾವ ಉದ್ದೇಶದಿಂದ ಇಲ್ಲಿ ಜಮಾಯಿಸಿರುವೆವೋ ಆ ಅನುಗ್ರಹವನ್ನು ಗಳಿಸುವವರನ್ನಾಗಿ ಅಲ್ಲಾಹನು ಮಾಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Hadeeqatul Mahdi, London. On 03-08-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon